**All India Radio: Bangalore**
**National Bulletin In Kannada**
**04.04.2025 07.35 a.m.**

ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

***************

ಮುಖ್ಯಾಂಶಗಳು

೧. ವಿಸ್ತೃತ ಚರ್ಚೆಗಳ ಬಳಿಕ ವಕ್ಫ್ ತಿದ್ದುಪಡಿ ಮಸೂದೆ-೨೦೨೫ಕ್ಕೆ ಸಂಸತ್ತು ಅಂಗೀಕಾರ

೨. ಬ್ಯಾಂಕಾಕ್‌ನಲ್ಲಿಂದು ೬ನೇ ಬಿಮ್‌ಸ್ಟೆಕ್ ಶೃಂಗಸಭೆಯಲ್ಲಿ ಪಾಲ್ಗೊಳ್ಳಲಿರುವ ಪ್ರಧಾನಿ ನರೇಂದ್ರ ಮೋದಿ

೩. ಮಣಿಪುರದಲ್ಲಿ ರಾಷ್ಟ್ರಪತಿ ಆಳ್ವಿಕೆ ಹೇರಿಕೆಯನ್ನು ದೃಢೀಕರಿಸುವ ಶಾಸನಬದ್ಧ ನಿರ್ಣಯಕ್ಕೆ ಅನುಮೋದನೆ

೪. ೧೫ನೇ ಹಾಕಿ ಇಂಡಿಯಾ ಸೀನಿಯರ್ ಪುರುಷರ ರಾಷ್ಟ್ರೀಯ ಚಾಂಪಿಯನ್‌ಶಿಪ್ ಉತ್ತರ ಪ್ರದೇಶದ ಝಾನ್ಸಿಯಲ್ಲಿಂದು ಆರಂಭ

***************

ವಕ್ಫ್ ತಿದ್ದುಪಡಿ ಮಸೂದೆ, ೨೦೨೫ ಸಂಸತ್ತು ಅಂಗೀಕರಿಸಿದೆ. ಸುಮಾರು ೧೨ ಗಂಟೆಗಳ ವಿಸ್ತೃತ ಚರ್ಚೆಗಳ ಬಳಿಕ ರಾಜ್ಯಸಭೆಯಲ್ಲಿ ಇಂದು ಬೆಳಗಿನ ಜಾವ ಈ ಮಸೂದೆಗೆ ಅನುಮೋದನೆ ನೀಡಲಾಗಿದೆ. ಮೇಲ್ಮನೆಯಲ್ಲಿ ೧೨೮ ಸದಸ್ಯರು ಮಸೂದೆಯ ಪರ ಹಾಗೂ ೯೫ ಸದಸ್ಯರು ಮಸೂದೆಯ ವಿರುದ್ಧ ಮತ ಚಲಾಯಿಸಿದರು.. ಲೋಕಸಭೆಯು ಈಗಾಗಲೇ ಈ ಮಸೂದೆಯನ್ನು ಅನುಮೋದಿಸಿದೆ.

ಪಾರಂಪಾರಿಕ ತಾಣಗಳನ್ನು ಸಂರಕ್ಷಿಸಲು ಮತ್ತು ಸಾಮಾಜಿಕ ಕಲ್ಯಾಣವನ್ನು ಉತ್ತೇಜಿಸುವ ನಿಬಂಧನೆಗಳೊಂದಿಗೆ ವಕ್ಫ್ ಆಸ್ತಿಗಳ ನಿರ್ವಹಣೆಯನ್ನು ಸುಗಮಗೊಳಿಸುವ ಗುರಿಯನ್ನು ವಕ್ಫ್ ತಿದ್ದುಪಡಿ ಮಸೂದೆ, ೨೦೨೫, ಹೊಂದಿದೆ. ಆಸ್ತಿ ನಿರ್ವಹಣೆಯಲ್ಲಿ ಪಾರದರ್ಶಕತೆಯನ್ನು ಹೆಚ್ಚಿಸುವ

ಮೂಲಕ, ವಕ್ಫ್ ಮಂಡಳಿಗಳು ಮತ್ತು ಸ್ಥಳೀಯ ಅಧಿಕಾರಿಗಳ ನಡುವಿನ ಸಮನ್ವಯ ಹೆಚ್ಚಿಸಿ, ಪಾಲುದಾರರ ಹಕ್ಕುಗಳನ್ನು ರಕ್ಷಿಸುವ ಮೂಲಕ ಆಡಳಿತವನ್ನು ಸುಧಾರಿಸುವ ಗುರಿಯನ್ನು ಹೊಂದಿದೆ.

ಮಸೂದೆಯ ಮೇಲಿನ ಚರ್ಚೆಗೆ ಉತ್ತರಿಸಿದ ಅಲ್ಪಸಂಖ್ಯಾತ ವ್ಯವಹಾರಗಳ ಸಚಿವ ಕಿರಣ್ ರಿಜಿಜು, ಈ ಮಸೂದೆಯಿಂದ ಕೋಟ್ಯಂತರ ಬಡ ಮುಸ್ಲಿಮರಿಗೆ ಪ್ರಯೋಜನವಾಗಲಿದೆ. ಇದು ಯಾವುದೇ ರೀತಿಯಲ್ಲೂ ಯಾವುದೇ ಮುಸ್ಲಿಮರಿಗೆ ಹಾನಿ ಮಾಡುವುದಿಲ್ಲ ಎಂದು ಹೇಳಿದರು.

ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸರ್ಕಾರ ಸಬ್ಕಾ ಸಾಥ್ ಮತ್ತು ಸಬ್ಕಾ ವಿಕಾಸ್ ಎಂಬ ದೃಷ್ಟಿಕೋನದೊಂದಿಗೆ ಕಾರ್ಯನಿರ್ವಹಿಸುತ್ತಿದ್ದು, ಯಾವುದೇ ಸಮುದಾಯದೊಂದಿಗೆ ತಾರತಮ್ಯ ಮಾಡುವುದಿಲ್ಲ.

ಧ್ವನಿ - ಕಿರಣ್ ರಿಜಿಜು ೧೮ ಸೆಕೆಂಡ್

ಚರ್ಚೆಯಲ್ಲಿ ಭಾಗವಹಿಸಿದ ಕಾಂಗ್ರೆಸ್‌ನ ಡಾ. ಸೈಯದ್ ನಾಸೀರ್ ಹುಸೇನ್, ಈ ಮಸೂದೆ ದಾರಿತಪ್ಪಿಸುವಂತಿದೆ ಎಂದು ಹೇಳಿದರು. ಡಾ. ಹುಸೇನ್ ಅವರ ಹೇಳಿಕೆಗೆ ಮಧ್ಯಪ್ರವೇಶಿಸಿ ಮಾತನಾಡಿದ ಕೇಂದ್ರ ಗೃಹ ಸಚಿವ ಅಮಿತ್ ಶಾ, ವಿರೋಧ ಪಕ್ಷಗಳು ಜನರನ್ನು ದಾರಿತಪ್ಪಿಸಲು ಪ್ರಯತ್ನಿಸುತ್ತಿವೆ ಎಂದು ಹೇಳಿದರು.

ಚರ್ಚೆಯಲ್ಲಿ ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ, ಶಿವಸೇನೆ-ಯುಬಿಟಿ ಯ ಸಂಜಯ್ ರಾವತ್, ಸಮಾಜವಾದಿ ಪಕ್ಷದ ಡಾ. ರಾಮ್ ಗೋಪಾಲ್ ಯಾದವ್, ಡಿಎಂಕೆಯ ತಿರುಚಿ ಶಿವಾ, ಟಿಎಂಸಿಯ ಸಂಜಯ್ ಸಿಂಗ್, ಪ್ರೊಫೆಸರ್ ಮನೋಜ್ ಕುಮಾರ್ ಝಾ ಸೇರಿದಂತೆ ವಿರೋಧ ಪಕ್ಷದ ಮತ್ತಿತರ ಸದಸ್ಯರು ಪಾಲ್ಗೊಂಡು ಮಸೂದೆ ಕುರಿತು ತಮ್ಮ ಅಭಿಪ್ರಾಯ ಹಂಚಿಕೊಂಡು ಅಸಮಾಧಾನ ವ್ಯಕ್ತಪಡಿಸಿದರು.

ಮಸೂದೆಯನ್ನು ತಂದಿದ್ದಕ್ಕಾಗಿ ಕೇಂದ್ರ ಸರ್ಕಾರವನ್ನು ಜೆಡಿಎಸ್ ಮುಖ್ಯಸ್ಥ ಎಚ್‌ಡಿ ದೇವೇಗೌಡ ಅಭಿನಂದಿಸಿದರು.

೧೯೨೩ ರ ಮುಸಲ್ಮಾನ ವಕ್ಫ್ ಕಾಯ್ದೆಯನ್ನು ರದ್ದುಗೊಳಿಸುವ ಮುಸಲ್ಮಾನ ವಕ್ಫ್ ರದ್ದತಿ ಮಸೂದೆ ೨೦೨೫ ಕ್ಕೆ ರಾಜ್ಯಸಭೆ ಅನುಮೋದನೆ ನೀಡಿದ್ದು, ಲೋಕಸಭೆಯಲ್ಲಿ ಈಗಾಗಲೇ ಮಸೂದೆಗೆ ಅನುಮೋದನೆ ದೊರೆತಿದೆ.

***************

ಲೋಕಸಭೆಯು ಕರಾವಳಿ ಸಾಗಣೆ ಮಸೂದೆ, ೨೦೨೪ ಅನ್ನು ಅಂಗೀಕರಿಸಿದೆ. ಈ ಮಸೂದೆಯು ಭಾರತದ ಕರಾವಳಿಯಲ್ಲಿ ವ್ಯಾಪಾರದಲ್ಲಿ ತೊಡಗಿರುವ ಹಡಗುಗಳನ್ನು ನಿಯಂತ್ರಿಸಲು ಪ್ರಯತ್ನಿಸುತ್ತದೆ.

ಈ ಮಸೂದೆಯಡಿಯಲ್ಲಿ, ಕರಾವಳಿ ನೀರು ಎಂದರೆ ಪಕ್ಕದ ಸಮುದ್ರ ವಲಯಗಳ ಜೊತೆಗೆ ಭಾರತದ ಪ್ರಾದೇಶಿಕ ಜಲಪ್ರದೇಶಗಳು. ಕರಾವಳಿ ಸಾಗಣೆಯ ನಿಯಂತ್ರಣಕ್ಕೆ ಸಂಬಂಧಿಸಿದ ಕಾನೂನನ್ನು ಕ್ರೋಢೀಕರಿಸುವುದು ಮತ್ತು ತಿದ್ದುಪಡಿ ಮಾಡುವುದು, ಕರಾವಳಿ ವ್ಯಾಪಾರವನ್ನು ಉತ್ತೇಜಿಸುವುದು ಮತ್ತು ದೇಶೀಯ ಭಾಗವಹಿಸುವಿಕೆಯನ್ನು ಉತ್ತೇಜಿಸುವುದು ಈ ಮಸೂದೆಯ ಗುರಿಯಾಗಿದೆ.

***************

ವಿಮಾನ ವಸ್ತುಗಳ ಹಿತಾಸಕ್ತಿಗಳ ಸಂರಕ್ಷಣಾ ಮಸೂದೆ, ೨೦೨೫ ಅನ್ನು ಸಂಸತ್ತು ಅಂಗೀಕರಿಸಿದೆ. ಲೋಕಸಭೆಯಲ್ಲಿ ಅಂಗೀಕಾರ ದೊರೆತ ಮಸೂದೆಯನ್ನು ರಾಜ್ಯಸಭೆಯು ಈಗಾಗಲೇ ಅಂಗೀಕರಿಸಿದೆ.

ವಿಮಾನ ವಸ್ತುಗಳ ಹಿತಾಸಕ್ತಿಗಳ ರಕ್ಷಣೆಗಾಗಿ ಮತ್ತು ವಿಮಾನ ಉಪಕರಣಗಳಿಗೆ ನಿರ್ದಿಷ್ಟವಾದ ವಿಷಯಗಳ ಕುರಿತು ಮೊಬೈಲ್ ಉಪಕರಣಗಳಲ್ಲಿನ ಅಂತಾರಾಷ್ಟ್ರೀಯ ಹಿತಾಸಕ್ತಿಗಳ ಸಮಾವೇಶಕ್ಕೆ ಮಾರ್ಗಸೂಚಿಯನ್ನು ಜಾರಿಗೆ ತರಲು ಮಸೂದೆ ಪ್ರಯತ್ನಿಸುತ್ತದೆ.

***************

ಪ್ರಧಾನಿ ನರೇಂದ್ರ ಮೋದಿ ಇಂದು ಥೈಲ್ಯಾಂಡ್‌ನ ಬ್ಯಾಂಕಾಕ್‌ನಲ್ಲಿ ನಡೆಯಲಿರುವ ೬ ನೇ ಬಿಮ್‌ಸ್ಟೆಕ್ ಶೃಂಗಸಭೆಯಲ್ಲಿ ಭಾಗವಹಿಸಲಿದ್ದಾರೆ. "ಸಮೃದ್ಧ, ಸ್ಥಿತಿಸ್ಥಾಪಕ ಮತ್ತು ಮುಕ್ತ - ಬಿಮ್‌ಸ್ಟೆಕ್" ಎಂಬುದು ಈ ಬಾರಿಯ ಶೃಂಗಸಭೆಯ ಧ್ಯೇಯವಾಕ್ಯವಾಗಿದೆ. ಶೃಂಗಸಭೆಯಲ್ಲಿ ಬ್ಯಾಂಕಾಕ್ ವಿಷನ್ ೨೦೩೦ ಅನ್ನು ಅಂಗೀಕರಿಸಲಾಗುವುದು. ಬಿಮ್‌ಸ್ಟೆಕ್‌ನ ಭವಿಷ್ಯದ ಹಾದಿಯನ್ನು ರೂಪಿಸಲು ಬಿಮ್‌ಸ್ಟೆಕ್‌ನ ಶ್ರೇಷ್ಠ ವ್ಯಕ್ತಿಗಳ ಗುಂಪಿನ ವರದಿಯನ್ನು ಸಹ ಇದೇ ವೇಳೆ ಅನುಮೋದಿಸಲಾಗುವುದು.

ಪ್ರಧಾನಿ ನರೇಂದ್ರ ಮೋದಿ ಎರಡು ದಿನಗಳ ಭೇಟಿಗಾಗಿ ನಿನ್ನೆ ಥೈಲ್ಯಾಂಡ್‌ನ ಬ್ಯಾಂಕಾಕ್ ತಲುಪಿದರು. ಬಳಿಕ ಪ್ರಧಾನಿ, ತಮ್ಮ ಸಹವರ್ತಿ ಪೇಟೊಂಗ್‌ಟಾರ್ನ್ ಶಿನವಾತ್ರ ಅವರೊಂದಿಗೆ ದ್ವಿಪಕ್ಷೀಯ ಮಾತುಕತೆ ನಡೆಸಿದರು.

ರಾಜಕೀಯ, ರಕ್ಷಣೆ, ಭದ್ರತೆ, ವ್ಯಾಪಾರ ಮತ್ತು ಹೂಡಿಕೆ ಸೇರಿದಂತೆ ವಿವಿಧ ಕ್ಷೇತ್ರಗಳ ಸಹಕಾರ ಕುರಿತು ಚರ್ಚಿಸಿದ ಅವರು, ಉಭಯ ರಾಷ್ಟ್ರಗಳ ನಡುವಿನ ಕಾರ್ಯತಂತ್ರದ ಪಾಲುದಾರಿಕೆಯನ್ನು ಬಲಪಡಿಸುವ ಮಾರ್ಗಗಳನ್ನು ಅನ್ವೇಷಿಸಿದರು. ಸಂಪರ್ಕ, ಆರೋಗ್ಯ, ವಿಜ್ಞಾನ ಮತ್ತು ತಂತ್ರಜ್ಞಾನ, ನವೋದ್ಯಮ, ನಾವೀನ್ಯತೆ, ಶಿಕ್ಷಣ, ಸಂಸ್ಕೃತಿ ಮತ್ತು ಪ್ರವಾಸೋದ್ಯಮ ಕ್ಷೇತ್ರಗಳಲ್ಲಿ ಸಹಯೋಗಗಳನ್ನು ಹೆಚ್ಚಿಸುವ ಅಗತ್ಯವನ್ನು ಉಭಯ ನಾಯಕರು ಒತ್ತಿ ಹೇಳಿದರು.

ಕೈಮಗ್ಗ ಮತ್ತು ಕರಕುಶಲ ವಸ್ತುಗಳು, ಡಿಜಿಟಲ್ ತಂತ್ರಜ್ಞಾನಗಳು, ಸಣ್ಣ ಅತಿಸಣ್ಣಮತ್ತು ಮಧ್ಯಮ ಉದ್ಯಮಗಳು ಮತ್ತು ಕಡಲ ಪರಂಪರೆಯ ಕ್ಷೇತ್ರಗಳಲ್ಲಿ ಒಪ್ಪಂದಗಳ ವಿನಿಮಯಕ್ಕೂ ಸಾಕ್ಷಿಯಾದರು. ತಮ್ಮ ಪ್ರವಾಸದ ಎರಡನೇ ಚರಣದಲ್ಲಿ ಪ್ರಧಾನಿ, ಶ್ರೀಲಂಕಾಕ್ಕೆ ಪ್ರಯಾಣಿಸಲಿದ್ದಾರೆ. ಮೂರು ದಿನಗಳ ಭೇಟಿಯ ಸಮಯದಲ್ಲಿ, ಅವರು ಶ್ರೀಲಂಕಾ ಅಧ್ಯಕ್ಷ ಅನುರ ಕುಮಾರ ದಿಸ್ಸಾನಾಯಕೆ ಅವರೊಂದಿಗೆ ದ್ವಿಪಕ್ಷೀಯ ಮಾತುಕತೆ ನಡೆಸಲಿದ್ದಾರೆ.

****************

ರಾಜ್ಯಸಭೆ ಇಂದು ಬೆಳಿಗ್ಗೆ ಮಣಿಪುರದಲ್ಲಿ ರಾಷ್ಟ್ರಪತಿ ಆಳ್ವಿಕೆಯ ಹೇರಿಕೆಯನ್ನು ದೃಢೀಕರಿಸುವ ಶಾಸನಬದ್ಧ ನಿರ್ಣಯವನ್ನು ಸಂಸತ್ತು ಅಂಗೀಕರಿಸಿದೆ.

ನಿರ್ಣಯದ ಮೇಲಿನ ಚರ್ಚೆಗೆ ಉತ್ತರಿಸಿದ ಕೇಂದ್ರ ಗೃಹ ಸಚಿವ ಅಮಿತ್ ಶಾ, ಕಳೆದ ವರ್ಷ ನವೆಂಬರ್‌ನಿಂದ ಮಣಿಪುರದಲ್ಲಿ ಯಾವುದೇ ಹಿಂಸಾಚಾರ ವರದಿಯಾಗಿಲ್ಲ.

ಪರಿಸ್ಥಿತಿಯನ್ನು ನಿಭಾಯಿಸುವಲ್ಲಿ ವಿಫಲರಾದ ಕಾರಣ ರಾಜ್ಯದಲ್ಲಿ ರಾಷ್ಟ್ರಪತಿ ಆಳ್ವಿಕೆಯನ್ನು ಹೇರಲಾಗಿದೆ ಎಂಬ ವಿರೋಧ ಪಕ್ಷದ ಆರೋಪವನ್ನು ತಳ್ಳಿಹಾಕಿದ ಅವರು, ಮುಖ್ಯಮಂತ್ರಿ, ರಾಜೀನಾಮೆ ನೀಡಿದ ನಂತರ, ಯಾವುದೇ ಪಕ್ಷ ಸರ್ಕಾರ ರಚಿಸಲು ಮುಂದೆ ಬಾರದೇ ಇದ್ದ ಹಿನ್ನೆಲೆ ರಾಷ್ಟ್ರಪತಿ ಆಳ್ವಿಕೆಯನ್ನು ಹೇರಲಾಗಿದೆ ಎಂದು ಸ್ಪಷ್ಟಪಡಿಸಿದರು.

ಧ್ವನಿ - ಅಮಿತ್ ಶಾ ೩೦ ಸೆಕೆಂಡ್

****************

ದೇಶೀಯ ಹೂಡಿಕೆದಾರರು ದೇಶದ ನವೋದ್ಯಮ ಕ್ಷೇತ್ರದೊಂದಿಗೆ ಕೈಜೋಡಿಸುವಂತೆ ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಪಿಯೂಷ್ ಗೋಯಲ್ ಕರೆ ನೀಡಿದ್ದಾರೆ.

ನವದೆಹಲಿಯ ಭಾರತ್ ಮಂಟಪದಲ್ಲಿ ಎರಡನೇ ಆವೃತ್ತಿಯ ನವೋದ್ಯಮ ಮಹಾಕುಂಭವನ್ನು ಉದ್ಘಾಟಿಸಿ ಮಾತನಾಡಿದ ಅವರು, ಪ್ರಸಕ್ತ ಹಣಕಾಸು ವರ್ಷದ ಅಂತ್ಯದ ವೇಳೆಗೆ ಭಾರತವು ವಿಶ್ವದ ೪ನೇ ಅತಿದೊಡ್ಡ ಆರ್ಥಿಕತೆಯಾಗಲಿದೆ. ೨೦೨೭ ರ ವೇಳೆಗೆ ದೇಶವು ಜಾಗತಿಕವಾಗಿ ೩ನೇ ಅತಿದೊಡ್ಡ ಜಿಡಿಪಿ ಆಗುವ ಆಶಯವನ್ನು ಹೊಂದಿದೆ ಎಂದು ಅವರು ಹೇಳಿದರು.

****************

ಬಿಹಾರದಲ್ಲಿ, ನಾಲ್ಕು ದಿನಗಳ ಚೈತಿ ಛಠ್ ಪೂಜಾ ಆಚರಣೆಗಳು ಇಂದು ಬೆಳಿಗ್ಗೆ ಸೂರ್ಯನಿಗೆ ನೈವೇದ್ಯ ಸಮರ್ಪಣೆಯೊಂದಿಗೆ ಮುಕ್ತಾಯಗೊಂಡವು. ರಾಜ್ಯಾದ್ಯಂತ ಭಕ್ತರು ನದಿಗಳ ದಡದಲ್ಲಿರುವ ವಿವಿಧ ಛಠ್ ಘಾಟ್‌ಗಳಲ್ಲಿ ಸೂರ್ಯನಿಗೆ ಮತ್ತು ಛಠ್ ಮೈಯಾಗೆ ಪ್ರಾರ್ಥನೆ ಸಲ್ಲಿಸಿದರು.

ಗಂಗಾ, ಗಂಡಕ್, ಕೋಸಿ ಮತ್ತು ಇತರ ಪ್ರಮುಖ ನದಿಗಳ ದಡದಲ್ಲಿರುವ ವಿವಿಧ ಛಠ್ ಘಾಟ್‌ಗಳಿಗೆ ಪ್ರಾರ್ಥನೆ ಸಲ್ಲಿಸಲು ಲಕ್ಷಾಂತರ ಭಕ್ತರು ಸೇರಿದ್ದರು.

ಪೂಜೆಯ ನಂತರ ಭಕ್ತರು ಛಠ್ ಘಾಟ್‌ನಲ್ಲಿ ಜನರಿಗೆ ಪ್ರಸಾದ ವಿತರಿಸಿದರು.

***************

ಭೂಕಂಪದಿಂದ ಹಾನಿಗೊಳಗಾಗಿರುವ  ಮ್ಯಾನ್ಮಾರ್‌ಗೆ ಅಂತರರಾಷ್ಟ್ರೀಯ ನೆರವಿಗಾಗಿ ವಿಶ್ವಸಂಸ್ಥೆ ಪ್ರಧಾನ ಕಾರ್ಯದರ್ಶಿ ಆಂಟೋನಿಯೊ ಗುಟೆರೆಸ್ ಕರೆ ನೀಡಿದ್ದಾರೆ.

ಇಂತಹ ಪರಿಸ್ಥಿತಿಯಿಂದ ಹೊರಬರಲು ಮ್ಯಾನ್ಮಾರ್‌ಗೆ ಅಂತಾರಾಷ್ಟ್ರೀಯ ಸಮುದಾಯ ತಕ್ಷಣವೇ ಅಗತ್ಯವಾದ ಧನಸಹಾಯ ಒದಗಿಸಬೇಕೆಂದು ಅವರು ಮನವಿ ಮಾಡಿದ್ದಾರೆ.

ವಿಶ್ವಸಂಸ್ಥೆಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಹಿಂಸಾಚಾರ ಮತ್ತು ಮಾನವ ಹಕ್ಕುಗಳ ಉಲ್ಲಂಘನೆಗೆ ಅಂತ್ಯ ಹಾಡಬೇಕು ಮತ್ತು ಪ್ರಜಾಪ್ರಭುತ್ವ ಬೇರೂರಲು ಮಾರ್ಗವನ್ನು ಕಂಡುಕೊಳ್ಳಬೇಕಿದೆ. ತುರ್ತು ಪರಿಹಾರ ಸಂಯೋಜಕ ಟಾಮ್ ಫ್ಲೆಚರ್ ಹಾಗೂ ವಿಶೇಷ ರಾಯಭಾರಿ ಜೂಲಿ ಬಿಷಪ್ "ಶಾಂತಿ ಮತ್ತು ಸಂವಾದಕ್ಕೆ ಬದ್ಧತೆಯನ್ನು ಬಲಪಡಿಸಲು ಮ್ಯಾನ್ಮಾರ್‌ಗೆ ಭೇಟಿ ನೀಡಲಿದ್ದಾರೆ ಎಂದು ಗುಟೆರೆಸ್ ಘೋಷಿಸಿದರು.

ಭೂಕಂಪದ ನಂತರ ಭಾರತವು ಈಗಾಗಲೇ ಆಪರೇಷನ್ ಬ್ರಹ್ಮ ಕಾರ್ಯಾಚರಣೆಯನ್ನು ನಡೆಸಿದ್ದು, ಮಾರ್ಚ್ ೨೮ ರ ಭೂಕಂಪದ ಕೇಂದ್ರಬಿಂದುವಾಗಿದ್ದ ಮ್ಯಾನ್ಮಾರ್‌ಗೆ ಪರಿಹಾರ ಸಾಮಗ್ರಿಗಳು ಮತ್ತು ಸಿಬ್ಬಂದಿಯನ್ನು ಕಳುಹಿಸಿಕೊಟ್ಟಿದೆ.

"ಸಾವಿನ ಸಂಖ್ಯೆ ಈಗ ೩ ಸಾವಿರಕ್ಕೆ ಏರುತ್ತಿದೆ. ಸಾವಿರಾರು ಜನರು ಗಾಯಗೊಂಡಿದ್ದಾರೆ ಮತ್ತು ಅನೇಕರು ಅವಶೇಷಗಳ ಅಡಿಯಲ್ಲಿ ಸಿಲುಕಿಕೊಂಡಿದ್ದಾರೆ ಎಂದಿರುವ ಆಂಟೊನಿಯೊ ಗುಟೆರೆಸ್, ಮಿಲಿಟರಿ ಸರ್ಕಾರ ಮತ್ತು ಬಂಡುಕೋರರ ನಡುವಿನ ತಾತ್ಕಾಲಿಕ ಕದನ ವಿರಾಮವನ್ನು ಅವರು ಸ್ವಾಗತಿಸಿದ್ದಾರೆ.

***************

೧೫ನೇ ಹಾಕಿ ಇಂಡಿಯಾ ಸೀನಿಯರ್ ಪುರುಷರ ರಾಷ್ಟ್ರೀಯ ಚಾಂಪಿಯನ್‌ಶಿಪ್ ಇಂದು ಉತ್ತರ ಪ್ರದೇಶದ ಝಾನ್ಸಿಯಲ್ಲಿರುವ ಮೇಜರ್ ಧ್ಯಾನ್ ಚಂದ್ ಹಾಕಿ ಕ್ರೀಡಾಂಗಣದಲ್ಲಿ ಆರಂಭವಾಗಲಿದೆ.

ಈ ತಿಂಗಳ ೧೫ ರವರೆಗೆ ನಡೆಯಲಿರುವ ಈ ಪಂದ್ಯಾವಳಿಯಲ್ಲಿ, ಒಟ್ಟು ೩೦ ತಂಡಗಳು ಭಾಗವಹಿಸಲಿವೆ.

ತಂಡಗಳನ್ನು ಎ, ಬಿ ಮತ್ತು ಸಿ ಎಂಬ ಮೂರು ವಿಭಾಗಗಳಾಗಿ ವಿಂಗಡಿಸಲಾಗಿದೆ. ಪ್ರತಿ ತಂಡಕ್ಕೆ ಗೆಲುವಿಗೆ ಮೂರು ಅಂಕಗಳು, ಡ್ರಾಗೆ ಒಂದು ಅಂಕ ದೊರಯಲಿದೆ. ಬಿ ಮತ್ತು ಸಿ ಗುಂಪಿನ ಪಂದ್ಯಗಳು ಇಂದು ಪ್ರಾರಂಭವಾಗಲಿದ್ದು, ಎ ವಿಭಾಗದ ಪಂದ್ಯಗಳು ಇದೇ ೮ ರಂದು ಪ್ರಾರಂಭವಾಗಲಿವೆ.

ಮೊದಲ ದಿನವಾದ ಇಂದು ಹಾಕಿ ರಾಜಸ್ಥಾನ ಮತ್ತು ಹಾಕಿ ಅರುಣಾಚಲಂ ಹಾಕಿ ಜಮ್ಮು ಮತ್ತು ಕಾಶ್ಮೀರವನ್ನು ಎದುರಿಸಲಿವೆ. ಛತ್ತೀಸ್‌ಗಢ ಹಾಕಿ, ಹಾಕಿ ಗುಜರಾತ್ ತಂಡವನ್ನು ಎದುರಿಸಲಿದ್ದರೆ, ಹಾಕಿ ಹಿಮಾಚಲ, ಹಾಕಿ ಅಸೋಸಿಯೇಷನ್ ಆಫ್ ಬಿಹಾರವನ್ನು ಎದುರಿಸಲಿವೆ.

***************